ಬೆಂಗಳೂರಿನಲ್ಲಿ ವರ್ಷಕ್ಕೆ 92,000 ಟನ್ ಇ–ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ದೇಶದಲ್ಲಿ ಅತ್ಯಧಿಕ ಇ–ತ್ಯಾಜ್ಯ ಉತ್ಪಾದಿಸುವ ನಗರಗಳಲ್ಲಿ ಬೆಂಗಳೂರು ಮೂರನೇ ಸ್ಥಾನದಲ್ಲಿದೆ.



ಮತ್ತು ಪಾದರಸ ದೇಹ ಪ್ರವೇಶಿಸಿದರೂ ಅದು ನರವ್ಯೂಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಹಾಗೂ ಮಕ್ಕಳ ಬೆಳವಣಿಗೆಯನ್ನು ಕುಂಠಿತವಾಗಿಸುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಈ ಮೂರು ಲೋಹಗಳು ಹಳೆಯ ಮೊಬೈಲ್ ಫೋನ್‌ನಲ್ಲಿ ಇರುತ್ತವೆ ಎಂಬುದು ಗಮನಾರ್ಹ.

## 4.5 ಲಕ್ಷ ಬಾಲಕಾರ್ಮಿಕರು

ದೇಶದಲ್ಲಿ 10ರಿಂದ 14 ವರ್ಷ ವಯೋಮಿತಿಯ 4.5 ಲಕ್ಷ ಮಕ್ಕಳು ‘ಇ–ತ್ಯಾಜ್ಯ’ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದಾರೆ. ವಿವಿಧ ಯಾರ್ಡ್, ವರ್ಕ್‌ಶಾಪ್ ಮೊದಲಾದ ಕಡೆಗಳಲ್ಲಿ ಅಸುರಕ್ಷತೆಯ ನೆರಳಲ್ಲಿ ಅವರು ಬೆವರು ಸುರಿಸುತ್ತಿದ್ದಾರೆ. ದೇಶದ ನಾನಾ ನಗರಗಳಲ್ಲಿ ನಡೆಸಿದ ಅಧ್ಯಯನದಿಂದ ಈ ಸಂಗತಿ ಬೆಳಕಿಗೆ ಬಂದಿದೆ.

‘ಇ– ತ್ಯಾಜ್ಯ ಸಂಗ್ರಹ, ವಿಂಗಡಣೆ ಹಾಗೂ ವಿತರಣೆಯಂಥ ವಿವಿಧ ಕೆಲಸಗಳಲ್ಲಿ ಬಾಲಕಾರ್ಮಿಕರನ್ನು ಯಾವುದೇ ಎಗ್ಗಿಲ್ಲದೆ ದುಡಿಸಿಕೊಳ್ಳಲಾಗುತ್ತಿದೆ. ಏಕೆಂದರೆ ಶೇಕಡಾ 95ರಷ್ಟು ಇ—ತ್ಯಾಜ್ಯ ಅಸಂಘಟಿತ ವಲಯದಿಂದ ಉತ್ಪತ್ತಿಯಾಗುತ್ತಿದೆ. ಈ ವಲಯದಲ್ಲಿ ಮಕ್ಕಳು ಬಾಲಕಾರ್ಮಿಕರಾಗುವುದನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳುವವರು ಯಾರು? ‘ಬಾಲಕಾರ್ಮಿಕರ ಮೇಲೆ ಇ—ತ್ಯಾಜ್ಯ ಉಂಟುಮಾಡುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕಿದೆ’ ಎನ್ನುತ್ತಾರೆ ಸಂಘಟನೆಯ ಡಿ. ಎಸ್. ರಾವತ್.

ವಿಷಕಾರಿ ತ್ಯಾಜ್ಯವನ್ನು ಚಿಂದಿ ಹೆಕ್ಕುವವರು ಹಾಗೂ ಗುಜರಿ ಅಂಗಡಿಯವರು ನಿರ್ವಹಿಸುತ್ತಿರುವ ಅಪಾಯಕಾರಿ ರೀತಿಯನ್ನು ಕಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭಟನೆಗಳು ನಡೆದಿದ್ದವು. ವಿಷ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿಗೆ ಒತ್ತಡ ಸೃಷ್ಟಿಯಾಗಿತ್ತು. ಈ ಹಿನ್ನೆಲೆಯಲ್ಲಿ ದೆಹಲಿ, ಅಹಮದಾಬಾದ್, ಮುಂಬೈ ಹಾಗೂ ಹೈದರಾಬಾದ್‌ನಲ್ಲಿ ವಿಷಯುಕ್ತ ತ್ಯಾಜ್ಯ ನಿರ್ವಹಣೆಯ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿಶ್ವಬ್ಯಾಂಕ್ ಹಣದ ನೆರವು ನೀಡಿದೆ. ವಿಷಕಾರಿ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಬೇಕು, ಹೇಗೆ ಮರುಬಳಕೆ ಮಾಡಬೇಕು ಎಂಬುದನ್ನು ಈ ಅಭಿಯಾನದಲ್ಲಿ ವಿವರಿಸಲಾಗಿದೆ. ಚಿಂದಿ ಆಯುವವನಿಂದ ಹಿಡಿದು, ಗುಜರಿ ಅಂಗಡಿಯವ, ರಿಪೇರಿಯಾದ ಉಪಕರಣಗಳನ್ನು ಕಳಚುವವ, ಕೊನೆಗೆ ಮರುಬಳಕೆ ಪದಾರ್ಥ ಕೊಳ್ಳುವ ಗ್ರಾಹಕರವರೆಗೂ ಜಾಗೃತಿ ಅಭಿಯಾನ ಮುಂದುವರಿಯುತ್ತದೆ.

## ಬೆಂಗಳೂರಿನ ಕಥೆ ಏನು?

ದೇಶದ ಮೂರನೇ ಮಹಾನಗರ ಬೆಂಗಳೂರಿನಲ್ಲಿ ಕಳೆದ ಒಂದು ದಶಕದ ಅವಧಿಯಲ್ಲೇ ಜನಸಂಖ್ಯೆ ಶೇಕಡಾ 47.18ರಷ್ಟು ಹೆಚ್ಚಾಗಿದೆ. ಸಾಲದೆಂಬಂತೆ ನಗರದ ಗಾತ್ರವನ್ನೂ ಸರ್ಕಾರ ಇದೇ ಅವಧಿಯಲ್ಲಿ ವಿಸ್ತಾರಗೊಳಿಸಿದೆ. ಜನಸಂಖ್ಯೆಗೆ ತಕ್ಕಂತೆ ಉಳಿದ ಸೌಲಭ್ಯಗಳು

